# ಶ್ರೀಚೈತನ್ಯ ಮಹಾಪ್ರಭು – ೯

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಸ್ವಾಮಿ ತಪಸ್ಯಾನಂದ

## ರಥಯಾತ್ರೆಯ ಸಂಭ್ರಮ

ಈ ಮಧ್ಯೆ ಜಗನ್ನಾಥನ ರಥಯಾತ್ರೆಯು ಸಮೀಪಿಸಿತು. ಶ್ರೀಚೈತನ್ಯರು ತಮ್ಮ ಅನುಯಾಯಿಗಳೊಂದಿಗೆ ಇಡೀ ದೇವ ಮಂದಿರವನ್ನು ಸ್ವಚ್ಛಗೊಳಿಸತೊಡಗಿದರು. ಅದಕ್ಕಾಗಿ ನೂರಾರು ಪೊರಕೆಗಳು ಮತ್ತು ನೂರಾರು ಬಿಂದಿಗೆಗಳಷ್ಟು ನೀರು ಬೇಕಾದವು. ಶ್ರೀಕೃಷ್ಣನಾಮವನ್ನು ಗಟ್ಟಿಯಾಗಿ ಉಚ್ಚರಿಸುತ್ತ ಅವರೆಲ್ಲರೂ. ಆ ಬೃಹದ್ ಮಂದಿರದ ವಿವಿಧ ಪೂಜಾಸ್ಥಾನಗಳ ಧೂಳು ಹೊಡೆದರು; ನೆಲವನ್ನು ಸಾರಿಸಿದರು ಮತ್ತು ನೀರಿನಿಂದ ತೊಳೆದರು. ಹೀಗೆ ಇಡೀ ದೇಗುಲವನ್ನು ಪರಿಶುಭ್ರವನ್ನಾಗಿ ಮಾಡಿದರು. ರಥಯಾತ್ರೆಯ ದಿನ ಶೀಘ್ರವೇ ಬಂದೇ ಬಿಟ್ಟಿತು. ಹದಿನೈದು ದಿನಗಳ ಏಕಾಂತವಾಸದ ಬಳಿಕ ಜಗನ್ನಾಥ ಸ್ವಾಮಿಯು, ಚಿನ್ನದ ಮೆರುಗಿನಿಂದ ಬೆಳಗುತ್ತ, ಸುಮೇರು ಶಿಖರದಂತೆ ಎತ್ತರವಾಗಿದ್ದು, ಅಲಂಕಾರಯುಕ್ತ ಛಾವಣಿ ಮತ್ತು ಹಾರಾಡುತ್ತಿದ್ದ ಧ್ವಜಪತಾಕೆಗಳಿಂದ ಒಡಗೂಡಿದ ಬೃಹದ್ರಥದಲ್ಲಿ ಹೊರಗೆ ಬಂದನು. ನೂರಾರು ತಳಿರುತೋರಣಗಳು ಮತ್ತು ನುಣುಪಾದ ಕನ್ನಡಿಗಳು ರಥದ ಎರಡೂ ಕಡೆ ಹಾರಾಡುತ್ತಿದ್ದವು. ರಥವು ಚಲಿಸುತ್ತಿದ್ದಂತೆ, ಅದಕ್ಕೆ ಕಟ್ಟಿದ್ದ ಅಸಂಖ್ಯಾತ ಪುಟ್ಟ ಪುಟ್ಟ ಘಂಟೆಗಳು ಕಿಂಕಿಣಿ ನಿನಾದವನ್ನು ಮಾಡುತ್ತಿದ್ದವು.

ಶ್ರೀಚೈತನ್ಯಮಹಾಪ್ರಭುಗಳು ತಮ್ಮ ಸಂಕೀರ್ತನದ ಗುಂಪನ್ನು ಏಳು ತಂಡಗಳಾಗಿ ವಿಂಗಡಣೆ ಮಾಡಿದರು. ನಾಲ್ಕು ತಂಡಗಳು ರಥದ ಮುಂಭಾಗದಲ್ಲಿದ್ದವು. ಎರಡು ತಂಡಗಳು ರಥದ ಇಕ್ಕೆಡೆಗಳಲ್ಲಿ ಇದ್ದವು ಮತ್ತು ಏಳನೆಯ ತಂಡ ರಥದ ಹಿಂಭಾಗದಲ್ಲಿ ಬರುತ್ತಿತ್ತು. ಈ ಏಳು ವಿಭಾಗಗಳಲ್ಲಿಯೂ ಭಕ್ತಸಂದಣಿಯ ಮಧ್ಯೆ ಒಂದೇ ಸಮಯದಲ್ಲಿ ಶ್ರೀಚೈತನ್ಯರು ಕಾಣಿಸಿಕೊಳ್ಳುತ್ತಿದ್ದರಂತೆ! ಇದೊಂದು ದೊಡ್ಡ ಪವಾಡವೇ ಸರಿ. ತಮ್ಮ ಶಕ್ತಿ ಮೀರಿ ಅವರು ಅಂದು ನರ್ತಿಸಿದರು. ಅದೇ ಸಮಯದಲ್ಲಿ ಏಳು ಸಾತ್ವಿಕ ಭಾವಗಳನ್ನು ಪ್ರಕಟಪಡಿಸಿದರು. ಅವರ ಕೂದಲಿನ ಬುಡಗಳು ಚರ್ಮದಿಂದ ಕಿತ್ತು ಬರುವಂತೆ, ರೋಮರೋಮವೂ ಎದ್ದು ನಿಲ್ಲುತ್ತಿತ್ತು; ಹಲ್ಲುಗಳು ಕಟಕಟನೆ ಶಬ್ದಮಾಡುತ್ತಿದ್ದವು; ಶರೀರದಾದ್ಯಂತ ಹರಿಯುತ್ತಿದ್ದ ಬೆವರ ರಾಶಿಯ ಜೊತೆಗೆ ರಕ್ತವೂ ಕಿತ್ತು ಬರುತ್ತಿತ್ತು; ಅವರ ತುಟಿಗಳು ಅರ್ಥವಾಗದ ಶಬ್ದಗಳನ್ನು ನುಡಿಯುತ್ತಿದ್ದವು. ಅವರ ಕಣ್ಣೀರ ಧಾರೆ ಮಿಕ್ಕವರನ್ನೂ ತೋಯಿಸುತ್ತಿತ್ತು; ಅವರ ಶರೀರದ ಬಣ್ಣ ಆಗಾಗ ಒಮ್ಮೆ ಗುಲಾಬಿಯಂತಿದ್ದರೆ, ಮತ್ತೊಮ್ಮೆ ಮಲ್ಲಿಗೆಯ ಹಾಗೆ ಬದಲಾಗುತ್ತಲೇ ಇತ್ತು. ಒಮ್ಮೆ ಒಣಗಿದ ಕಟ್ಟಿಗೆಯ ಹಾಗೆ ಶರೀರವು ಜಡವಾಗಿ ನಿಂತಿರುತ್ತಿತ್ತು. ಮತ್ತೊಮ್ಮೆ ಅದೇ ದೇಹ ಬಾಯಲ್ಲಿ ಜೊಲ್ಲು ಸುರಿಸುತ್ತ, ಮಂದ ಉಸಿರಾಟದೊಂದಿಗೆ ನೆಲದ ಮೇಲೆ ಹೊರಳಾಡುತ್ತಿತ್ತು.

ಶಚೀಪುತ್ರನಾದ ಶ್ರೀ ಚೈತನ್ಯದೇವರ ಈ ಬಗೆಯ ಭಕ್ತ್ಯಾವೇಶದಿಂದ ಉದ್ದೀಪನಗೊಂಡ ಅಗಾಧ ಭಕ್ತ ವೃಂದದ ಜಯಜಯಕಾರಗಳ ನಡುವೆ ಜಗನ್ನಾಥ ರಥವು ಮೆಲ್ಲಮೆಲ್ಲನೆ ಸಾಗುತ್ತಲಿತ್ತು. ಬಲಗಂಡಿ ಎಂಬಲ್ಲಿನ ಉದ್ಯಾನವನದ ಹತ್ತಿರ ರಥ ನಿಂತಿತು. ಇದು ಜಗನ್ನಾಥನ ಮಧ್ಯಾಹ್ನದ ನೈವೇದ್ಯದ ಸಮಯ. ವಿವಿಧ ಭಕ್ಷ್ಯಭೋಜ್ಯಗಳನ್ನು ರಾಶಿರಾಶಿಯಾಗಿ ರಥದಲ್ಲಿ ಕುಳಿತ ಜಗನ್ನಾಥ ಸ್ವಾಮಿಗೆ ನಿವೇದಿಸಲಾಯಿತು. ಚೈತನ್ಯ ಮಹಾಪ್ರಭುವು ಆ ಉದ್ಯಾನಗೃಹದ ಮಂಭಾಗಕ್ಕೆ ತೆರಳಿದರು. ನೃತ್ಯದಿಂದಾದ ಆಯಾಸದಿಂದ ಸಂಪೂರ್ಣ ಶಕ್ತಿ ಉಡುಗಿ ಹೋಗಿ, ಜಗನ್ನಾಥಸ್ವಾಮಿಗೆ ಅಡ್ಡಬಿದ್ದರು. ಶ್ರೀಚೈತನ್ಯರ ಅನುಯಾಯಿಗಳೆಲ್ಲ ರುಚಿಕರವಾದ ಜಗನ್ನಾಥನ ಪ್ರಸಾದವನ್ನು ಸವಿದರು. ನೈವೇದ್ಯದ ನಂತರ ರಥವು ಮತ್ತೆ ಮುನ್ನಡೆಯಬೇಕಾಗಿತ್ತು. ಆದರೆ ಹಾಗಾಗಲೇ ಇಲ್ಲ. ಆನೆಗಳಿಂದ ಎಳೆಸಿದರೂ ಅದು ಜಗ್ಗಲೇ ಇಲ್ಲ. ಆದರೆ ಮಹಾಪ್ರಭುವು ಸ್ವಲ್ಪ ನೂಕಿದೊಡನೆ, ರಥ ಸರಸರನೆ ಸರಿಯಲಾರಂಭಿಸಿತು. ಸಾಯಂಕಾಲದ ಹೊತ್ತಿಗೆ 'ಗುಂಡೀಚಾ' ಎಂಬ ಸ್ಥಳವನ್ನು ತಲುಪುವ ತನಕ ಶ್ರೀಚೈತನ್ಯರು ಮತ್ತು ಅವರ ಸಂಗಡಿಗರು ರಥದೊಡನೆ ಹಾಡುತ್ತ, ನರ್ತಿಸುತ್ತ ನಡೆದರು. ಅಲ್ಲಿ ಪುಣ್ಯವಿಗ್ರಹಗಳನ್ನು ರಥದಿಂದ ಇಳಿಸಿ, ಸಿಂಹಾಸನಗಳಲ್ಲಿ ಇರಿಸಲಾಯಿತು.

ಸಂಪ್ರದಾಯದಂತೆ ಜಗನ್ನಾಥಸ್ವಾಮಿಯು, ಇಲ್ಲಿ ಒಂಭತ್ತು ದಿನಗಳ ಕಾಲ ನೆಲೆಸಬೇಕು. ಈ ಉತ್ಸವದ ಹಿಂದಿನ ಭಾವನೆ ಇದು. ದ್ವಾರಕೆಯ ಶ್ರೀಕೃಷ್ಣನೇ ಆಗಿರುವ ಜಗನ್ನಾಥಸ್ವಾಮಿ, ತಾನು ಗೋಪಗೋಪಿಯರೊಡನೆ ಸರಸವಾಡಿದ ಬೃಂದಾವನಕ್ಕೆ ಪ್ರತಿವರ್ಷ ಹೋಗಲು ಇಚ್ಛಿಸುತ್ತಿದ್ದನಂತೆ. ಗುಂಡೀಚಾ ಎಂಬಲ್ಲಿನ ಉದ್ಯಾನವನವೇ ಪುರೀಧಾಮದ ಬೃಂದಾವನ. ಅಲ್ಲಿ ಒಂಬತ್ತು ದಿನಗಳಿದ್ದು ಅಲ್ಲಿನ ಕೊಳಗಳಲ್ಲಿ, ಕಾಡುಮೇಡುಗಳಲ್ಲಿ ಜಗನ್ನಾಥನು ವಿಹರಿಸುತ್ತಾನೆ. ಈ ಸಲ, ಚೈತನ್ಯರ ಮೂಲಕ ತನ್ನ ವ್ರಜಭೂಮಿಯ ಭಕ್ತರ ಸಂಗಡ, ಸಾಕ್ಷಾತ್ತಾಗಿ ಅಲ್ಲಿ ವಿಹರಿಸುತ್ತಿದ್ದಾನೆ! ಒಂಬತ್ತು ದಿನಗಳಾದವು. ಅಂದು ಹೇರಾ ಪಂಚಮಿ. ಲಕ್ಷ್ಮಿಯ ಉತ್ಸವ ನಡೆಯಿತು. ನಂತರ ಜಗನ್ನಾಥ ಸ್ವಾಮಿಯು ತನ್ನ ನಿಜಮಂದಿರಕ್ಕೆ ಬಿಜಯಮಾಡಲು


ಶ್ರೀಚೈತನ್ಯರ ನಾಮಸಂಕೀರ್ತನೆಯ ಒಂದು ಸಾಂಪ್ರದಾಯಿಕ ಚಿತ್ರ

ವಾಪಸ್ಸು ಹೊರಟನು. ಹಿಂತಿರುಗುವ ಮೆರವಣಿಗೆಯಲ್ಲಿ ಕೂಡ ಆನಂದಾತಿರೇಕದಿಂದ ಚೈತನ್ಯರು ನರ್ತಿಸುತ್ತ, ಹಾಡುತ್ತ ನಡೆದರು.

ನಂತರ, ನಾಲ್ಕು ತಿಂಗಳ ಕಾಲ ತಮ್ಮೊಡನೆ ಇದ್ದ ನವದ್ವೀಪದ ಭಕ್ತರಿಗೆ ಹಿಂತಿರುಗಿರೆಂದು ಚೈತನ್ಯರು ಆಣತಿಯಿತ್ತರು. ಗೃಹಸ್ಥರಾದ ಅವರೆಲ್ಲರೂ ತಾವು ಪ್ರತಿಪಾದಿಸಿದ ನೂತನ ವೈಷ್ಣವ ಪಂಥವನ್ನು ಬಂಗಾಳ ದೇಶದಲ್ಲಿ ಪ್ರಸಾರ ಮಾಡಬೇಕೆಂಬುದು ಶ್ರೀ ಚೈತನ್ಯರ ಉದ್ದೇಶವಾಗಿತ್ತು. ನಂತರ, ತಮ್ಮ ಸಂಗಾತಿಯಾದ ನಿತ್ಯಾನಂದನಿಗೂ ಬಂಗಾಳ ಪ್ರಾಂತ್ಯಕ್ಕೆ ಹಿಂತಿರುಗಿ ಹೋಗುವಂತೆ ಅವರು ಆದೇಶವಿತ್ತರು. ಅದ್ವೈತ ಆಚಾರ್ಯರೊಡಗೂಡಿ ಬಂಗಾಲದಾದ್ಯಂತ ಕೃಷ್ಣಭಕ್ತಿಯ ಸಂದೇಶವನ್ನು ಪ್ರಸರಿಸುವಂತೆ ಹೇಳಿದರು. ನಂತರ, ಮೂರು ವರ್ಷಗಳ ಕಾಲ, ಪುರೀಧಾಮದಲ್ಲಿಯೆ ವಾಸ್ತವ್ಯ ಹೂಡಿದರು. ಪ್ರತಿದಿನವೂ ಜಗನ್ನಾಥ ಮೂರ್ತಿಯ ಮುಂದುಗಡೆ ಸಂಕೀರ್ತನೆ ನಡೆಸಿದರು. ಪ್ರತಿ ವರ್ಷವೂ ರಥಯಾತ್ರೆಯ ಪರ್ವದಿನದಂದು ಸ್ತ್ರೀಯರೊಳಗೊಂಡು ನವದ್ವೀಪದ ಅನೇಕ ಭಕ್ತರು ಪಾಲ್ಗೊಂಡು, ಅವರ ಸ್ಫೂರ್ತಿಭರಿತ ಸಾನ್ನಿಧ್ಯದ ಲಾಭವನ್ನು ಪಡೆದರು.

### ಬೃಂದಾವನ ತೀರ್ಥಯಾತ್ರೆ

ಮೂರು ವರ್ಷಗಳು ಹೀಗೆಯೇ ಕಳೆದುವು. ಶ್ರೀಕೃಷ್ಣಲೀಲಾ ಸ್ಥಾನವಾದ ಬೃಂದಾವನಕ್ಕೆ ಹೋಗಬೇಕೆಂಬ ಶ್ರೀಚೈತನ್ಯರ ಬಯಕೆ ಬೆಳೆಯುತ್ತಲೇ ಹೋಯಿತು. ದಾರಿಯಲ್ಲಿ ಗಂಗಾಸ್ನಾನ ಮಾಡಬೇಕೆಂದೂ ನವದ್ವೀಪದಲ್ಲಿ ತಾಯಿ ಶಚಿಯನ್ನು ಕಾಣಬೇಕೆಂದೂ ಅವರಿಗೆ ಇಚ್ಛೆಯುಂಟಾಯಿತು. ತಮ್ಮ ಕೆಲವು ಸಂಗಡಿಗರೊಂದಿಗೆ ಅವರು ಪುರಿಯಿಂದ ಹೊರಟರು. ಒರಿಸ್ಸಾದ ಉತ್ತರದ ಗಡಿಯ ತನಕ ಅವರ ಆಹಾರ ವಸತಿಗಳಿಗೆ ವ್ಯವಸ್ಥೆಯಾಗಿತ್ತು. ಈ ಬಗ್ಗೆ ರಾಜಾ ಪ್ರತಾಪರುದ್ರನ ಆಜ್ಞೆಯಿತ್ತು. ಗಡಿಯಾಚೆ, ರಭಸದಿಂದ ಹರಿಯುತ್ತಿದ್ದ ನದಿಯೊಂದನ್ನು ಅವರು ದಾಟಬೇಕಾಗಿ ಬಂತು.

ನಂತರ ಮತಾಂಧನೂ, ಕುಡುಕನೂ ಆದ ಮುಸ್ಲಿಮ ರಾಜನೊಬ್ಬನ ಪ್ರಾಂತ್ಯವನ್ನು ಹಾದುಹೋಗಬೇಕಾಗಿ ಬಂತು. ಆದರೆ, ಶ್ರೀಚೈತನ್ಯರ ರಮಣೀಯ ವ್ಯಕ್ತಿತ್ವ ಮತ್ತು ರೋಮಾಂಚನವನ್ನುಂಟುಮಾಡುವ ಭಕ್ತಿಭಾವಗಳಿಂದ ಆಕರ್ಷಿತರಾದ ಗಡಿಕಾವಲಿನವರು ಶ್ರೀಚೈತನ್ಯರ ಭಕ್ತರಾಗಿ ಅವರ ಮುಂದಿನ ಪ್ರಯಾಣಕ್ಕೆ ಅನುವು ಮಾಡಿಕೊಟ್ಟರು. ನಂತರ ಶ್ರೀಚೈತನ್ಯರು ಬಂಗಾಳ ದೇಶವನ್ನು ಹಾದುಹೋಗಿ ಗಂಗಾ ತೀರವನ್ನು ತಲುಪಿದರು. ದೋಣಿಯಲ್ಲಿ ಸಾಗುತ್ತ ದಾರಿಯಲ್ಲಿ 'ಪಾನಿಹಾಟಿ' ಮತ್ತು 'ಕಾಮಾರ್‌ಹಾಟಿ' ಗಳಲ್ಲಿ ನಿಂದರು. ಈ ಎಲ್ಲ ಪ್ರದೇಶಗಳಲ್ಲಿಯೂ ಸಾವಿರಾರು ಜನ ಅವರ ದರ್ಶನಕ್ಕಾಗಿ ನೆರೆದಿದ್ದರು. ಅವರ ಸಾನ್ನಿಧ್ಯದಿಂದ ಉಂಟಾದ ಭಕ್ತಿಭಾವ ಮಂದಾನಿಲದ ಕಂಪಿನಂತೆ ಹರಡಿ ಅಲ್ಲಿದ್ದ ಜನಗಳ ಹೃದಯಗಳನ್ನೆಲ್ಲ ಉದ್ದೀಪನಗೊಳಿಸಿತು. ಇನ್ನೂ ಪ್ರಯಾಣ ಮಾಡುತ್ತ, ಅವರು ಶಾಂತಿಪುರಕ್ಕೆ ಹೋಗಿ, ಅದ್ವೈತ ಆಚಾರ್ಯರ ಮನೆಯಲ್ಲಿ ಹತ್ತು ದಿನಗಳ ಕಾಲ ಇದ್ದರು. ಅಲ್ಲಿಯೆ ತಮ್ಮ ತಾಯಿಯನ್ನು ಭೇಟಿ ಮಾಡಿ ಆಕೆಯ ದುಃಖವನ್ನು ಶಮನ ಮಾಡಿದರು. ಆಕೆಯ ಕಾಲುಗಳಿಗೆ ಬಿದ್ದು, ಪಾದಗಳನ್ನು ಹಿಡಿದುಕೊಂಡು ಬೃಂದಾವನಕ್ಕೆ ಹೋಗಲು ಅನುಮತಿ ಪಡೆದುಕೊಂಡರು. ನಂತರ ಪುರೀಧಾಮಕ್ಕೆ ಹಿಂತಿರುಗಿ, ಕೆಲಕಾಲ ತಂಗಿ, ಬೃಂದಾವನದತ್ತ ಪ್ರಯಾಣ ಬೆಳಸಿದರು.

ಛೋಟಾ ನಾಗಪುರದ ದಟ್ಟ ಅರಣ್ಯಗಳ ನಡುವೆ ಮಾರ್ಗ ಸಾಗುತ್ತಲಿತ್ತು. ಅಲ್ಲಿ ಭೀಕರ ಮೃಗಗಳೂ, ಕಾಡುಮನುಷ್ಯರೂ ಇದ್ದರು. ಮಹಾಪ್ರಭುಗಳ ಜೊತೆಗೆ ಬಾಲಚಂದ್ರ ಭಟ್ಟಾಚಾರ್ಯನೆಂಬ ಸಹಾಯಕನೊಬ್ಬ ಮಾತ್ರ ಇದ್ದನು. ಅವನು ಆಹಾರ ಪದಾರ್ಥಗಳನ್ನು ಹೇಗೋ ಸಂಪಾದಿಸಿ, ಸಾಧ್ಯವಾದ ಕಡೆಗಳಲ್ಲೆಲ್ಲ ಅಡುಗೆ ಮಾಡಿ ಬಡಿಸುತ್ತಿದ್ದನು. ಈ ಸಂದರ್ಭದಲ್ಲಿ ಶ್ರೀಚೈತನ್ಯರ ಪ್ರಭಾವದಿಂದ ಕಾಡುಜನರು ವೈಷ್ಣವರಾಗಿ ಪರಿವರ್ತನೆ ಹೊಂದಿದರು. ಇದಕ್ಕಿಂತಲೂ ಅದ್ಭುತವೆಂದರೆ, ಹುಲಿ ಜಿಂಕೆಗಳು ಇವರ ಸಾನ್ನಿಧ್ಯದಲ್ಲಿ, ಪರಸ್ಪರ ಪ್ರೇಮದಿಂದ ನೆಕ್ಕತೊಡಗಿದವು. ಕಾಡುಮೃಗಗಳು ಐಕಮತ್ಯದಿಂದ ಕೂಡಿ ಅವರ ಜೊತೆ ಸಾಗಿದವು. ಮಹಾಪ್ರಭುವು ಸ್ನಾನ ಮಾಡುತ್ತಿದ್ದ ಕೊಳಗಳಲ್ಲಿ ಆನೆಗಳು ಶ್ರೀಕೃಷ್ಣನಾಮಾಮೃತದ ದುಂದುಭಿಯನ್ನು ನುಡಿಸುತ್ತಿರುವವೋ ಎಂಬಂತೆ ಘೀಳಿಡುತ್ತ ನೀರೆರಚಿಕೊಂಡು ನರ್ತಿಸುತ್ತಿದ್ದವು. ನವಿಲು ಮೊದಲಾದ ಪಕ್ಷಿಗಳು ಶ್ರೀಚೈತನ್ಯರ ಸಾನ್ನಿಧ್ಯವನ್ನು ಬಯಸಿ ಶ್ರೀಕೃಷ್ಣಸಂಕೀರ್ತನೆಯನ್ನೂ, ನರ್ತನ

ವನ್ನೂ ಗೈಯುತ್ತ ಅವರೊಡನೆ ಸಾಗುತ್ತಿದ್ದವು. ಜಾರ್‌ಖಂಡದ ಗೋಂಡಾರಣ್ಯಗಳಲ್ಲಿ ವಾಸಿಸುತ್ತಿದ್ದ ದುಷ್ಟ ಕ್ಷುದ್ರ ಬುಡಕಟ್ಟು ಜನರನ್ನು ಶ್ರೀಚೈತನ್ಯರು ಶ್ರೀಕೃಷ್ಣಭಕ್ತಿಯ ಉಪದೇಶದಿಂದ ಪಾವನರನ್ನಾಗಿಸಿದರು. ಹೀಗೆ ಕಾಡಿನ ಮಾರ್ಗಗಳಲ್ಲಿ, ಸುತ್ತಲ ಪ್ರಕೃತಿ ಸೌಂದರ್ಯವನ್ನು ಸವಿಯುತ್ತ ಅವರು ಸಾಗಿದರು. ಸಾಧಾರಣವಾಗಿ ಪ್ರಯಾಣಕಾಲದಲ್ಲಿ ಎದುರಿಸಬೇಕಾಗಿ ಬರುವ ಯಾವ ಕಷ್ಟಕೋಟಲೆಗಳೂ ಅವರನ್ನು ಬಾಧಿಸಲಿಲ್ಲ. ಹೀಗೆಯೇ ಸಾಗುತ್ತ ಅವರು ಕೊನೆಗೆ ವಾರಾಣಸಿಯನ್ನು ತಲುಪಿದರು.

**ಕಾಶೀಧಾಮದಲ್ಲಿ**

ಕಾಶಿಯಲ್ಲಿ ತಪನ್ ಮಿಶ್ರ ಎನ್ನುವವರ ಮನೆಯಲ್ಲಿ ಶ್ರೀಕೃಷ್ಣಚೈತನ್ಯರು ಉಳಿದುಕೊಂಡಿದ್ದರು. ಅವರನ್ನು ಶ್ರೀಚೈತನ್ಯರು ಭೇಟಿಮಾಡಿದ್ದು ಮಣಿಕರ್ಣಿಕಾ ಘಾಟಿನಲ್ಲಿ. ಅಲ್ಲೊಬ್ಬ ದುರಹಂಕಾರಿ ಅದ್ವೈತ ಸಂನ್ಯಾಸಿ ಇದ್ದನು, ಅವನ ಹೆಸರು ಪ್ರಕಾಶಾನಂದ. ಅವನು ಹಿಂದೆ, ಶ್ರೀಚೈತನ್ಯರು ಪುರಿಯಲ್ಲಿದ್ದಾಗ, ಅವರನ್ನು ಅವಹೇಳನ ಮಾಡುವಂತಹ ಪತ್ರಗಳನ್ನು ಬರೆದಿದ್ದನು. ಪ್ರಕಾಶಾನಂದನ ಬಳಿಗೆ ಒಬ್ಬ ಬ್ರಾಹ್ಮಣ ಬಂದು ಶ್ರೀಚೈತನ್ಯರು ವಾರಾಣಸಿಗೆ ಬಂದಿರುವ ವರ್ತಮಾನವನ್ನು ತಿಳಿಸಿದನು. ಬ್ರಾಹ್ಮಣನು ಪ್ರಕಾಶಾನಂದನಿಗೆ ಹೇಳಿದ್ದು ಹೀಗೆ: " ಜಗನ್ನಾಥ ಧಾಮದಿಂದ ಒಬ್ಬ ಸಂನ್ಯಾಸಿ ಬಂದಿದ್ದಾನೆ. ಅವನ ವೈಭವ ಮತ್ತು ಶಕ್ತಿಗಳನ್ನು ಬರಿಯ ಮಾತುಗಳಲ್ಲಿ ವರ್ಣಿಸಲಾಗದು. ಅವನದು ನೀಳವಾದ ಕಾಲುಗಳು, ಪರಿಶುದ್ಧ ಬಂಗಾರದಂತಿದೆ ಅವನ ಮೈಕಾಂತಿ, ಆಜಾನುಬಾಹು, ಕಮಲದಂತಹ ಸುಂದರ ಕಣ್ಣುಳ್ಳವನು, ಭಗವದವತಾರಕ್ಕಿರುವ ಎಲ್ಲ ಚಿಹ್ನೆಗಳನ್ನೂ ಅವನಲ್ಲಿ ಕಾಣಬಹುದು. ಆತನ ಕಡೆ ದೃಷ್ಟಿಹಾಯಿಸಿದವರೆಲ್ಲ ಶ್ರೀಕೃಷ್ಣನಾಮವನ್ನು ಉಚ್ಚರಿಸಲು ಆರಂಭಿಸುವರು. ಭಾಗವತ ಮಹಾಪುರಾಣದಲ್ಲಿ ವರ್ಣಿಸಿರುವ ಪರಮ ಭಗವದ್ಭಕ್ತನೊಬ್ಬನ ಎಲ್ಲ ಲಕ್ಷಣಗಳೂ ಇವನಲ್ಲಿವೆ. ಆತನ ನಾಲಿಗೆ ಸದಾ ಕೃಷ್ಣನಾಮವನ್ನೇ ಜಪಿಸುತ್ತಿರುತ್ತದೆ; ಆತನ ಕಣ್ಣಿನಿಂದ ಗಂಗಾಧಾರೆಯಂತೆ ಕಣ್ಣೀರು ಹರಿಯುತ್ತಿರುತ್ತದೆ. ಒಮ್ಮೊಮ್ಮೆ ಅವನು ನರ್ತಿಸುವನು; ಮತ್ತೊಮ್ಮೆ ನಗುವನು; ಈಗ ಹಾಡುತ್ತಿದ್ದರೆ, ಮರುಗಳಿಗೆ ಅಳುತ್ತಿರುವನು. ಮಗದೊಮ್ಮೆ ಸಿಂಹದಂತೆ ಗರ್ಜಿಸುವನು." ಇದನ್ನು ಕೇಳಿ ಒಣ ವೇದಾಂತಿಯಾದ ಪ್ರಕಾಶಾನಂದನು ಅಪಹಾಸ್ಯದಿಂದ ನಕ್ಕನು. ಬ್ರಾಹ್ಮಣನ ವಿವರಣೆಯನ್ನೆಲ್ಲ ತಿರಸ್ಕರಿಸಿದನು. ಈ ಹೊಸಬನು ಸಂನ್ಯಾಸಿಯೇ ಅಲ್ಲ, ಅವನೊಬ್ಬ ಮಾಟಗಾರನೆಂದು ಹೀಯಾಳಿಸಿದನು. ವೇದಾಂತಪೀಠವಾದ ಕಾಶಿಯಲ್ಲಿ ಈ ಬಗೆಯ ಭಾವುಕತೆಯ ಸರಕನ್ನು ಮಾರಾಟಮಾಡಲಾಗದು ಎಂದು ನಿಂದಿಸಿದನು. ಶ್ರೀಚೈತನ್ಯರು ಈ ಬಾರಿ ಪ್ರಕಾಶಾನಂದನನ್ನು ಭೇಟಿಮಾಡಲಿಲ್ಲ; ಹಿಂತಿರುಗುವಾಗ ನೋಡೋಣವೆಂದು ಮುಂದೆ ಸಾಗಿದರು. ನಂತರ ಅವರು ಪ್ರಯಾಗಕ್ಕೆ ಹೋದರು. ಅಲ್ಲಿ ತ್ರಿವೇಣೀ ಸಂಗಮದಲ್ಲಿ ಸ್ನಾನ ಮಾಡಿದರು. ಯಮುನಾ ನದಿಯ ದರ್ಶನ ಅವರನ್ನು ಕೃಷ್ಣಪ್ರಜ್ಞೆಯಲ್ಲಿ ಮುಳುಗಿಸಿಬಿಟ್ಟಿತು; ವೇಗವಾಗಿ ಹರಿಯುತ್ತಿದ್ದ ನದಿಗೆ, ಪ್ರಾಣವನ್ನೂ ಲೆಕ್ಕಿಸದೆ ಅವರು ಧುಮುಕುವಂತೆ ಮಾಡಿತು.

**ಬೃಂದಾವನದಲ್ಲಿ**

ಮೂರು ದಿನಗಳ ನಂತರ ಶ್ರೀಚೈತನ್ಯರು ಶ್ರೀಕೃಷ್ಣಜನ್ಮಸ್ಥಾನವಾದ ಮಥುರೆಗೆ ಹೊರಟರು. ಆ ನಗರದ ದರ್ಶನವೇ ಅವರಲ್ಲಿ ಭಕ್ತಿಯನ್ನು ಉದ್ದೀಪನಗೊಳಿಸಿತು. ಅಲ್ಲಿದ್ದ ಕಾಲವೆಲ್ಲ ಸಂಕೀರ್ತನೆ ಮತ್ತು ಭಾವಾವಸ್ಥೆಗಳಲ್ಲಿ ಕಳೆದುಹೋಯಿತು. ಅಲ್ಲಿ ಅವರು ಒಬ್ಬ ಬ್ರಾಹ್ಮಣನನ್ನು ಅಕಸ್ಮಾತ್ತಾಗಿ ಸಂಧಿಸಿದರು. ಅವನು ಮಾಧವೇಂದ್ರ ಪುರಿಗಳಿಂದ ದೀಕ್ಷೆ ಪಡೆದವನು. ಮಾಧವೇಂದ್ರ ಪುರಿಗಳು, ಶ್ರೀಚೈತನ್ಯರ ಗುರುಗಳಾದ ಈಶ್ವರ ಪುರಿಗಳ ಗುರುಗಳು. ಮಾಧವೇಂದ್ರ ಪುರಿಯು ಕಳೆದುಹೋಗಿದ್ದ ಗೋಪಾಲನ ವಿಗ್ರಹವನ್ನು ಕಂಡುಹಿಡಿದು, ಗೋವರ್ಧನ ಗಿರಿಯಲ್ಲಿ ಪ್ರತಿಷ್ಠಾಪಿಸಿದ್ದಾರೆ ಎಂದು ಆ ಬ್ರಾಹ್ಮಣ ಹೇಳಿದನು. ಮಥುರೆಯಲ್ಲಿ ಶ್ರೀಚೈತನ್ಯರು ವಿಶ್ರಾಮಘಾಟಿನಲ್ಲಿ ಸ್ನಾನಮಾಡಿ, ಕೃಷ್ಣಜನ್ಮಸ್ಥಾನದಲ್ಲಿರುವ ಕೇಶವನ ಮೂರ್ತಿಯನ್ನು ಪೂಜಿಸಿದರು. ನಂತರ, ಮಥುರೆಯ ಎಲ್ಲ ಪುಣ್ಯಕ್ಷೇತ್ರಗಳನ್ನೂ, ಹತ್ತಿರವಿರುವ ಮಧುವನ, ತಾಲವನ, ಕುಮುದ, ಬಹುದ ಮುಂತಾದ ಕ್ಷೇತ್ರಗಳನ್ನೂ ದರ್ಶಿಸಿದರು. ಅವರು ದಾರಿಯಲ್ಲಿ ಹೋಗುತ್ತಿದ್ದಾಗ, ಬದಿಯಲ್ಲಿ ಹುಲ್ಲು ಮೇಯುತ್ತಿದ್ದ ಹಸುಗಳು ಅವರನ್ನು ಸುತ್ತುವರೆದವು; ಅಂಬಾ ಎಂದು ಜೋರಾಗಿ ಧ್ವನಿಗೈದವು; ಅವರ ಕಾಲುಗಳನ್ನು ಪ್ರೇಮದಿಂದ ನೆಕ್ಕಿದವು. ಜಿಂಕೆಗಳ ತಂಡಗಳು ಶ್ರೀಚೈತನ್ಯರನ್ನು ಕಂಡು ಓಡೋಡಿ ಬಂದು ಅವರನ್ನೇ ಎಡೆಬಿಡದೆ ನೋಡುತ್ತಿದ್ದವು; ಧೈರ್ಯದಿಂದ ಅವರು ಹೋದೆಡೆಯೆಲ್ಲ ಹಿಂಬಾಲಿಸಿದವು. ನವಿಲುಗಳು ಅವರ ಮುಂದೆ ನರ್ತಿಸಿದವು. ಶ್ರೀಚೈತನ್ಯರ ಆಗಮನದಿಂದ ಮರಬಳ್ಳಿಗಳಲ್ಲಿ ಚಿಗುರು ಬಿಟ್ಟಿತು; ಅವು ಜೇನಿನಂತಹ ಆನಂದ ಬಾಷ್ಪಗಳನ್ನು ಹರಿಸಿದವು. ಹಣ್ಣುಹೂವುಗಳಿಂದ ಕೂಡಿದ ಟೊಂಗೆಗಳೇ ಅವರ ಪಾದದಡಿಯಲ್ಲಿ ಬಿದ್ದವು. ಸ್ನೇಹಿತನನ್ನು ಬರಮಾಡಿಕೊಳ್ಳುವಾಗ ಉಡುಗೊರೆ ನೀಡುವಂತೆ ಇತ್ತು ಆ ದೃಶ್ಯ. ಶ್ರೀಕೃಷ್ಣನಾಮೋಚ್ಚಾರಣೆಯನ್ನು ಮಾಡುತ್ತ ಶ್ರೀಚೈತನ್ಯರು ದಾರಿಯನ್ನು ಕ್ರಮಿಸಿದರು. ಪುರೀಧಾಮದಲ್ಲಿ ಕಾಣಿಸಿದ್ದಕ್ಕಿಂತಲೂ ಹತ್ತು ಪಟ್ಟು ಭಕ್ತಿಭಾವಾವೇಶ ಬೃಂದಾವನಕ್ಕೆ ಪ್ರಯಾಣ ಮಾಡುತ್ತಿದ್ದಾಗ ಅವರಲ್ಲಿ ಉಂಟಾಯಿತು. ಮಥುರಾ ಮತ್ತು ಬೃಂದಾವನದ ಕಾಡುಗಳಲ್ಲಿ ಅಡ್ಡಾಡುತ್ತಿದ್ದಾಗ ಅದು ಸಾವಿರ ಪಾಲಿನಷ್ಟು ಹೆಚ್ಚಿತು. ಇದೆಲ್ಲ ನಡೆದಿದ್ದು ಕ್ರಿ.ಶ. ೧೫೧೫ ರಲ್ಲಿ. ಆಗ ಶ್ರೀಚೈತನ್ಯರ ವಯಸ್ಸು ಕೇವಲ ೨೯.

(ಮುಂದುವರಿಯುವುದು)